# ಮನ್‌ಸೂರೆಗೊಳ್ಳುವ ಕೌರ್ 103ರ ಅಥ್ಲೀಟ್ ಅಜ್ಜಿ

93. ಉಂಡಾಡುವ ವಯಸ್ಸೇನಲ್ಲ ಇದು. ಕೂತಲ್ಲಿಂದ ಏಳುವುದೇ ಕಷ್ಟವೆನ್ನುವ ಕಾಲ. ಇದೇ ವಯಸ್ಸಿಗೆ ಬದುಕಿನ ಹೊಸ ಅಧ್ಯಾಯ ಆರಂಭಿಸಿರುವ ಪಟಿಯಾಲಾದ ಪಂಜಾಬಿ ಅಜ್ಜಿ ಮನ್ ಕೌರ್‌ಗೀಗ 103ರ ಹರೆಯ. ಸತತ ಆರು ವಿಶ್ವದಾಖಲೆಗಳನ್ನು ಬರೆದ ಧೀಮಂತೆ. ತನ್ನ ದಾಖಲೆಗಳನ್ನು ತಾನೇ ಮುರಿಯುತ್ತ, ದೇಶ–ವಿದೇಶ ಸುತ್ತುತ್ತಿರುವ ಅಜ್ಜಿ ರನ್ನಿಂಗ್ ಶೂಸ್ ಧರಿಸಿ ಮೈದಾನಕ್ಕಿಳಿದರೆ ನೋಡುವವರು ಕ್ಷಣ ನಿಬ್ಬೆರಗಾಗಬೇಕು.

■ ಸುಶೀಲಾ ಡೋಣೂರ



ಮೊದಲ ನೋಟದಲ್ಲೇ ಹಿರಿಯಜ್ಜಿಯಂತೆ ಪ್ರೀತಿಯುಕ್ಕಿಸುವ ಮನ್ ಕೌರ್ ಇತ್ತೀಚೆಗೆ 'ಪಿಂಕಥಾನ್'ನ 7ನೇ ಆವೃತ್ತಿಗಾಗಿ ಬೆಂಗಳೂರಿನ ಜನರಲ್ಲಿ ಓಡುವ ಉಮೇದು ಮೂಡಿಸಲು ಇಲ್ಲಿಗೆ ಬಂದಿದ್ದರು. ಕಾಲಿಗೆರಗುವ ಎಲ್ಲರನ್ನೂ ತನ್ನೆರಡೂ ಕೈಗಳಿಂದ ಹರಸಿ–ಹಾರೈಸುತ್ತಿದ್ದರು. ಅಲ್ಲಿ ನೆರೆದಿದ್ದವರಿಗೆಲ್ಲ ಅಜ್ಜಿಯ ಬಗೆಗೊಂದು ಸಣ್ಣ ಕುತೂಹಲ, ಎದೆತುಂಬಿ ಉಕ್ಕುವ ಪ್ರೀತಿ, ಅಷ್ಟೇ ಅಚ್ಚರಿಯ ನೋಟ. ಎಲ್ಲರ ಆಕರ್ಷಣೆಯ ಕೇಂದ್ರ.

ಅಜ್ಜಿಗೆ ಪಂಜಾಬಿ ಬಿಟ್ಟರೆ ಬೇರೆ ಭಾಷೆ ಗೊತ್ತಿಲ್ಲ. ಜೊತೆಗಿದ್ದ 80 ವರ್ಷದ ಮಗ ಗುರ್‌ದೇವ್ ಸಿಂಗ್ ಅಜ್ಜಿಯ ಮಾತುಗಳನ್ನು ಅನುವಾದ ಮಾಡುತ್ತ ಕೂತಿದ್ದರು.

'ಚಂಡೀಗಡದ ಚಮತ್ಕಾರ್', 'ಪಟಿಯಾಲದ ಪವಾಡ ಮಹಿಳೆ', 'ಹರಿಯಾಣದ ಹಿರಿಯಮ್ಮ' – 103ರ ಮನ್ ಕೌರ್‌ಗಿರುವ ಹಲವು ನಾಮಾಂಕಿತಗಳಿವು. ಪಟಿಯಾಲದ ಅರಮನೆಯಲ್ಲಿ ಮಹಾರಾಣಿಯ ಸೇವಕಿಯಾಗಿ ದುಡಿಯುತ್ತ, ಹಾಡುವ ಹವ್ಯಾಸ ಬೆಳೆಸಿಕೊಂಡ ಮನ್‌ಗೆ ಓಡುವತ್ತ ಚಿತ್ತ ಜಾರಿದ್ದು 93ರ ಪ್ರಾಯದಲ್ಲಿ. ಸ್ವತಃ ಕ್ರೀಡಾಪಟುವಾದ ಹಿರಿಯಮಗ ಗುರ್‌ದೇವ್ ಸಿಂಗ್ ಅವರೇ ಅಜ್ಜಿಗೆ ಗುರು–ಮಾರ್ಗದರ್ಶಿ.

'ಓಡಮ್ಮ ನೋಡೋಣ' ಎಂದು ಮಗ ಅಂದಿದ್ದ ದಿನವೇ ರನ್ನಿಂಗ್ ಶೂಸ್ ಧರಿಸಿ ಮೈದಾನಕ್ಕಿಳಿದ ಶತಾಯುಷಿ ಅಜ್ಜಿ, ಈ ಹತ್ತು ವರ್ಷಗಳ ಅಂತರದಲ್ಲಿ ಕ್ರಮಿಸಿದ ಹಾದಿ ಸಣ್ಣದೇನಲ್ಲ. ಎಲ್ಲಿಂದ ಬಂತು ಆ ಹುಮ್ಮಸ್ಸು ಅಂತ ಕೇಳಿದರೆ, ಹೊಗಳಿಕೆಗೆ ಹಿಗ್ಗುವ ಮಗುವಿನಂತೆ ನಗುವ ಅಜ್ಜಿ, 'ನನಗೆ ಓಡುವುದೆಂದರೆ ಇಷ್ಟ, ಓಡಿದೆ...' ಎನ್ನುತ್ತ ತಮ್ಮ ಬದುಕಿನ ಕತೆ ಬಿಚ್ಚುತ್ತಾರೆ.